
ತಮಿಳುನಾಡಿನ ನಾಯನಾರ್ ಸಂತರು -೭

# ಚೇರಮಾನ್ ಪೆರುಮಾಳ್ ನಾಯನಾರ್

ಕಥೆ : ಟಿ.ಎಂ.ಎಸ್. ಚಿತ್ರ : ಶಂಕರ್

ಕೊಡುಂಕೋಲೂರಿನ ರಾಜಮನೆತನದಲ್ಲಿ ಹುಟ್ಟಿದ ಚೇರಮಾನ್ ಪೆರುಮಾಳ್ ಶಿವನ ಅಪ್ರತಿಮ ಭಕ್ತನಾಗಿದ್ದನು. ಕೊಡುಂಕೋಲೂರಿನ ಕೊನೆಯ ಅರಸ ಉತ್ತರಾಧಿಕಾರಿಯಿಲ್ಲದೆ ಸತ್ತು ಹೋದದ್ದರಿಂದ ಎಲ್ಲರೂ ಅವನ ದಾಯಾದಿ ತಮ್ಮನಾದ ಚೇರಮಾನನೇ ರಾಜ್ಯವನ್ನಾಳಬೇಕೆಂದು ಬಯಸಿದರು.












4
ರಾಜಾ ಚೇರಮಾನರಿಗೆ ಜಯವಾಗಲಿ!
ಪ್ರೀತಿಯ ಪ್ರಜೆಗಳೇ, ನಾನೀಗ ಪ್ರತಿಜ್ಞೆ ಮಾಡುತ್ತಿದ್ದೇನೆ: ಶಿವನ ಆಶೀರ್ವಾದದಿಂದ ನಾನು ಎಲ್ಲರ ಕಷ್ಟ, ಸಂಕಟಗಳನ್ನು ಪರಿಹರಿಸುತ್ತೇನೆ. ಶಿವನ ಭಕ್ತನಾಗಿದ್ದುಕೊಂಡೇ ನಾನು ಆಳುತ್ತೇನೆ.
5
ಅಷ್ಟರಲ್ಲಿ ಅಲ್ಲಿಗೊಬ್ಬ ಅಗಸ ಬಂದ. ಅವನ ದೇಹವೆಲ್ಲ ಉಪ್ಪು ಮಿಶ್ರಿತವಾದ ಮಣ್ಣಿನಿಂದ ಕೂಡಿತ್ತು. ರಾಜ ಆನೆಯಿಂದಿಳಿದು ಅವನಿಗೆ ನಮಸ್ಕರಿಸಿದ.
6
ಮಹಾರಾಜ! ನನ್ನಂಥ ಬಡ ಅಗಸನಿಗೆ ನೀವು ಕೈ ಮುಗಿಯಬೇಕೇ?
ಈ ಚೇರಮಾನ್ ಸೇವಕನಾಗಿದ್ದಾನೆ ನಿನ್ನನ್ನು ನೋಡಿ ಭಸ್ಮವನ್ನು ಮೈಗೆ ಬಳಿದುಕೊಂಡ ಶಿವನ ನೆನಪು ನನಗಾಯಿತು.
ಓ! ನಮ್ಮ ರಾಜ ಎಂಥ ಭಕ್ತನಾಗಿದ್ದಾನೆ!
7
ರಾಜನ ಹೃದಯಪೂರ್ವಕ ಪೂಜೆಯನ್ನು ಶಿವನು ಸ್ವೀಕರಿಸುತ್ತಿದ್ದ. ಕೊನೆಯಲ್ಲಿ ತನ್ನ ಕಡಗವನ್ನು ಅಲುಗಾಡಿಸುತ್ತ ತಾನು ಪೂಜೆಯನ್ನು ಸ್ವೀಕರಿಸಿದ್ದನ್ನು ಸೂಚಿಸುತ್ತಿದ್ದ.
ದೇವರೇ! ನಿನ್ನ ಕೃಪೆಗೆ ಎಣೆಯಿಲ್ಲ. ಪೂಜೆಯ ಕೊನೆಯಲ್ಲಿ ಪ್ರತಿದಿನ ಕಡಗವನ್ನು ಅಲುಗಾಡಿಸಿ ಸದ್ದು ಮಾಡಿ, ನನಗೆ ಅದನ್ನು ಕೇಳುವ ಭಾಗ್ಯವನ್ನು ಕರುಣಿಸುತ್ತಿರುವೆ.



8
ಒಂದು ದಿನ ಕಡಗದ ಸದ್ದು ಕೇಳಿಬರಲಿಲ್ಲ. ಇದರಿಂದ ರಾಜನಿಗೆ ಆತಂಕವುಂಟಾಯಿತು.
ದೇವಾ! ನಾನೇನು ತಪ್ಪು ಮಾಡಿದೆನೋ ನನಗೆ ತಿಳಿದಿಲ್ಲ. ನಿನ್ನ ಕಡಗದ ಸದ್ದು ಇಂದು ಕೇಳಿ ಬರಲಿಲ್ಲ. ನಿನ್ನ ಕೃಪೆ ನನ್ನ ಮೇಲೆ ಹರಿದು ಬರದಿದ್ದರೆ ನಾನು ಬದುಕಿ ಏನು ಪ್ರಯೋಜನ?
ಆ ಕ್ಷಣದಲ್ಲೇ ನಟರಾಜನ ಕಡಗದ ಸದ್ದು ಸ್ಪಷ್ಟವಾಗಿ ಕೇಳಿಬಂತು.
9
ಹೇ, ಕರುಣಾಸಾಗರನೇ! ಇಂದು ಕಡಗದ ಧ್ವನಿ ಎಂದಿಗಿಂತಲೂ ಜೋರಾಗಿ ಕೇಳಿಸುತ್ತಿದೆ! ಇಷ್ಟು ಹೊತ್ತು ನೀನೇಕೆ ಕಡಗದ ಧ್ವನಿ ಮಾಡಲಿಲ್ಲ?
ಚೇರ, ನಾನು ಆರೂರಿನ ಸುಂದರರ ಸುಮಧುರವಾದ ಸ್ತುತಿಯನ್ನು ಕೇಳುವುದರಲ್ಲೇ ಮಗ್ನನಾಗಿದ್ದೆ. ಆದ್ದರಿಂದ ತಡವಾಯಿತು.
ಆಹ! ಸುಂದರ ಸ್ತೋತ್ರಗಳಿಂದ ಶಿವನನ್ನೇ ಮರುಳು ಮಾಡುವ ಸುಂದರರ ದರ್ಶನವನ್ನು ನಾನು ಎಂದಿಗೆ ಪಡೆದೇನು?
10
ಬಡತನದಿಂದ ಕಂಗೆಟ್ಟ ಶಿವಭಕ್ತನಾದ ಪಾಣಭದ್ರನಿಗೆ ಭಗವಾನ್ ಸೋಮಸುಂದರನು ಕನಸಿನಲ್ಲಿ ಕಾಣಿಸಿಕೊಂಡ.
ಪಾಣ, ಕೋಡುಂಕೋಲೂರಿನ ರಾಜ ಚೇರಮಾನ್‌ಗಾಗಿ ಒಂದು ಓಲೆಯನ್ನು ನನ್ನ ದೇಗುಲದ ಪೀಠದಲ್ಲಿಟ್ಟಿದ್ದೇನೆ. ಅದನ್ನು ಅವನಿಗೆ ಕೊಟ್ಟು ನಿನ್ನ ಬಡತನವನ್ನು ನಿವಾರಿಸಿಕೋ.
ಭಗವಾನ್, ನನ್ನ ಬಡತನವನ್ನು ದೂರಮಾಡಲು ನೀವು ಮನಸ್ಸು ಮಾಡಿದ್ದೀರಾ? ನೀವು ಹೇಳಿದಂತೆ ನಾನು ಮಾಡುತ್ತೇನೆ.
ಪಾಣಭದ್ರನು ಕೂಡಲೇ ಕೋಡುಂಕೋಲೂರಿಗೆ ಹೊರಟ.
11
ಮಹಾರಾಜ, ಶಿವಭಕ್ತನಾದ ಪಾಣಭದ್ರನು ನಿಮ್ಮನ್ನು ನೋಡಲು ಮದುರೈಯಿಂದ ಬಂದಿದ್ದಾನೆ.
ಶಿವಭಕ್ತನೇ? ಈ ಕೂಡಲೇ ಅವನನ್ನು ಒಳಗೆ ಕರೆದುಕೊಂಡು ಬಾ.


12
ಸ್ವಾಗತ ನಿಮಗೆ! ಶಿವಭಕ್ತರೇ, ಸ್ವಾಗತ.
ಮಹಾರಾಜ, ನಮಸ್ಕಾರಗಳು. ನನ್ನ ಹೆಸರು ಪಾಣಭದ್ರ. ಮದುರೆಯ ಒಡೆಯನಾದ ಶಿವನು ನಿಮಗೆ ಒಂದು ಓಲೆಯನ್ನು ಕಳುಹಿಸಿಕೊಟ್ಟಿದ್ದಾರೆ.
ಏನು? ಶಿವನೇ ಓಲೆಯನ್ನು ಕಳುಹಿಸಿಕೊಟ್ಟನೆ? ನಾನೇ ಧನ್ಯ. ಇಲ್ಲಿ ಕೊಡಿ.
ಇದೋ ಇಲ್ಲಿದೆ.


13
ರಾಜನು ಆ ಓಲೆಯನ್ನು ಭಕ್ತಿಯಿಂದ ತನ್ನ ತಲೆಗಿಟ್ಟುಕೊಂಡ.
ಸಾಕ್ಷಾತ್ ಭಗಂಮತನೇ ಈ ಓಲೆಯನ್ನು ಕೊಟ್ಟ ಅವನೆಂಥ ಕರುಣಾಳು! ಪ್ರಿಯ ಪಾಣ, ನಿನ್ನ ಬಡತನವೆಲ್ಲವೂ ನಿವಾರಣೆಯಾಗಬೇಕು. ಅಲ್ಲವೆ? ದಯವಿಟ್ಟು ನನ್ನ ರಾಜ್ಯವನ್ನೇ ಸ್ವೀಕರಿಸು.
ಮಹಾರಾಜ! ನೀನು ನಿನ್ನ ಹೃದಯದಲ್ಲಿ ಶಿವನ ಸಾಮ್ರಾಜ್ಯವನ್ನೇ ಪಡೆದಿರುವೆ. ಪೃಥ್ವಿಯಲ್ಲಿ ಕೊಡುಂಕೋಲೂರಿನ ರಾಜ್ಯವನ್ನೇ ಪಡೆದಿರುವೆ. ನಾನಾದರೋ ಶಿವನ ಸೇವಕ, ಅಷ್ಟೆ. ನನಗೇಕೆ ನಿನ್ನ ರಾಜ್ಯ? ನನಗೆ ಒಂದಿಷ್ಟು ಸಂಪತ್ತು ನೀಡಿದರೆ, ಅಷ್ಟರಿಂದಲೇ ನಾನು ತೃಪ್ತನಾಗಿ ಶಿವನ ಸೇವೆ ಮಾಡಿಕೊಂಡು ಇದ್ದುಬಿಡುವೆ.


14
ನಿನ್ನ ಮೂಲಕ ಶಿವನೇ ಓಲೆ ಕಳುಹಿಸಿದ್ದಾನೆ. ನನ್ನ ಬೊಕ್ಕಸದಲ್ಲಿರುವ ಚಿನ್ನ, ವಜ್ರ ಹಾಗೂ ಇತರ ಆಭರಣ, ಐಶ್ವರ್ಯಗಳನ್ನೆಲ್ಲ ಮೂಟೆ ಕಟ್ಟಿ ನಿನಗೆ ಉಡುಗೊರೆಯಾಗಿ ಕೊಡುತ್ತೇನೆ.
ನನಗೆ ಅಷ್ಟೊಂದು ಆಭರಣವೆ? ಶಿವಾ! ನಿನ್ನ ಕರುಣೆಗೆ ಏನೆಂದು ಹೇಳಲಿ? ರಾಜ, ನಾನಿನ್ನು ಬರುತ್ತೇನೆ.
ಸೋಮಸುಂದರನ ಕೃಪೆಯನ್ನು ನೆನೆದು ನನಗೆ ರೋಮಾಂಚನ ವಾಗುತ್ತಿದೆ. ಬಾ, ಪಾಣ, ಸಕಲ ರಾಜಮರ್ಯಾದೆಗಳೊಂದಿಗೆ ನಿನ್ನನ್ನು ನನ್ನ ರಾಜ್ಯದ ಗಡಿಯವರೆಗೂ ಬಿಟ್ಟು ಬರುತ್ತೇನೆ. ಸೋಮ ಸುಂದರನಿಗೆ ಜಯವಾಗಲಿ!
''ಎಲ್ಲಿಯವರೆಗೆ ಕಪ್ಪೆಮರಿಗೆ ಬಾಲ ಬಿದ್ದುಹೋಗವುದಿಲ್ಲವೋ, ಅಲ್ಲಿಯವರೆಗೆ ಅದು ಕೇವಲ ನೀರಿನಲ್ಲೇ ಇರಬೇಕಾಗುತ್ತದೆ. ಅದು ನೆಗೆದು ದಡಕ್ಕೆ ಬಂದು ನೆಲದ ಮೇಲೆ ಸಂಚರಿಸಲಾರದು. ಆದರೆ ಬಾಲ ಬಿದ್ದುಹೋದ ಒಡನೆಯೇ ನೆಲದ ಮೇಲಕ್ಕೆ ನೆಗೆದು ಬರುತ್ತದೆ. ಬಳಿಕ ಅದು ನೀರಿನಲ್ಲೂ ಇರಬಲ್ಲದು, ನೆಲದ ಮೇಲೂ ಇರಬಲ್ಲದು. ಅದೇ ರೀತಿ ಮನಷ್ಯನ ಅವಿದ್ಯೆ ಎಂಬ ಬಾಲ ಕಳಚಿ ಬಿದ್ದು ಹೋಗದವರೆಗೆ ಸಂಸಾರವೆಂಬ ನೀರಿನಲ್ಲೇ ಇರುತ್ತಾನೆ. ಅವಿದ್ಯೆ ಎಂಬ ಬಾಲ ಕಳಚಿ ಬಿದ್ದುಹೋಯಿತು ಎಂದರೆ-ಜ್ಞಾನ ದೊರೆಯಿತು ಎಂದರೆ ಮುಕ್ತನಾಗಿ ತಿರುಗಾಡಬಲ್ಲ, ಇಚ್ಛೆ ಬಂದರೆ ಸಂಸಾರದಲ್ಲೂ ಇರಬಲ್ಲ.''
– ಶ್ರೀರಾಮಕೃಷ್ಣರು